# ಕಾನನ

ಏಪ್ರಿಲ್-2026


ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ




**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಓ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಸಂಗಮನಾಥ ಪಿ. ಸಜ್ಜನ

ಸುಕನ್ಯ


© ಪ್ರವೀಣ್ ಎಸ್.

ಏಪ್ರಿಲ್–2026

WCG
Wildlife Conservation Group

## ಲೇಖನಗಳು


* ಗಮನಿಸದಿದ್ದರೆ ಗರಗಸ,
  ನಮ್ಮ ಜೀವ ಸೇರುವುದು ಆಗಸ ... – ಧನರಾಜ್ ಎಂ.

* ಪ್ರಕೃತಿಯ ಮಡಿಲಲ್ಲಿ "ಕೆಂಪು ಹರಟೆ ಮಲ್ಲ"
  ಹಕ್ಕಿಯ ಮೌನದ ಮಾತು – ಶಶಿಧರಸ್ವಾಮಿ ಆರ್. ಹಿರೇಮಠ

* ಹುಳಿ ಸೊಪ್ಪು ಮರ – ಕೆ. ಪಿ. ಶಂಕರಪ್ಪ
  ಶಾಂತಮ್ಮ ಎಸ್.

* ವನಬಂಧ – 11 – ಸುಬ್ಬು ಬಾದಲ್

* ನಿನ್ನ ಕೆಂಪು – ನನ್ನ ಕೆಂಪೇ? (ವಿವಿ ಅಂಕಣ) – ಜೈಕುಮಾರ್ ಆರ್.

* ಬಾ ಚೈತ್ರ (ಕವನ) – ಚನ್ನಕೇಶವ ಜಿ. ಲಾಳನಕಟ್ಟೆ

* ಪ್ರಕೃತಿ ಬಿಂಬ – ಅರವಿಂದ ಕೂಡ್ಲ
  ದೀಪ್ತಿ ಎನ್.




© ಶ್ರೀಕಾಂತ್ ಎ. ವಿ.

ಮುಖಪುಟ ಛಾಯಾಚಿತ್ರ
ಮುಸುವ

ಮುಖಪುಟ
ಧನರಾಜ್ ಎಂ.

ವಿನ್ಯಾಸ
ಧನರಾಜ್ ಎಂ.




# ಗಮನಿಸದಿದ್ದರೆ ಗರಗಸ,
# ನಮ್ಮ ಜೀವ ಸೇರುವುದು ಆಗಸ ...

ನನಗೆ ವನ್ಯಜೀವಿಗಳ ಮೇಲೆ ಆಸಕ್ತಿ ಬರಲು WCGಯ ಕಾರ್ಯವೈಖರಿ ಮುಖ್ಯ ಕಾರಣ ಎಂದರೆ ತಪ್ಪಾಗಲಾರದು. ಮೊದಮೊದಲು ಪಕ್ಷಿವೀಕ್ಷಣೆಯಿಂದ ಶುರುವಾದ ನನ್ನ ಹವ್ಯಾಸ, ಕಾನನಕ್ಕೆ ಬರೆಯಲು ದಾರಿ ಮಾಡಿಕೊಟ್ಟಿತು. ಅಲ್ಲಿಂದ ಮುಂದೆ, ವನ್ಯಜೀವಿ ಸಂರಕ್ಷಣೆಗೆ ಏನೆಲ್ಲಾ ಮಾಡಬಹುದು ಎಂದು ಯೋಚಿಸುತ್ತಾ ಇಂದು ಹಲವಾರು ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದೇನೆ. ಆದರೆ ಕಳೆದ 8 ವರ್ಷಗಳಿಂದ ನಾನು ಯಾವುದೇ ಲೇಖನ ಬರೆದಿರಲಿಲ್ಲ, ಕಾರಣ ಏನು ಅಂತ ಯೋಚಿಸುತ್ತಿದ್ದೀರಾ? ಅಂತಹ ಮಹಾ ಕಾರಣ ಏನೂ ಇಲ್ಲ ಕಣ್ರೀ, 8 ವರ್ಷದಿಂದ ಕಾನನ ಪತ್ರಿಕೆ ವಿನ್ಯಾಸ ಕಾರ್ಯದಲ್ಲಿ ಸಾಕಷ್ಟು ನನ್ನನ್ನು ನಾನು ತೊಡಗಿಸಿಕೊಂಡಿದ್ದೇನೆ ಅಷ್ಟೇ. ಈಗ ಇದ್ದಕ್ಕಿದ್ದ ಹಾಗೆ, ಲೇಖನ ಬರೀಬೇಕು ಅನ್ನಿಸ್ತು; ಯಾಕಂದ್ರೆ ಒಂದು ಅತೀ ಪ್ರಮುಖವಾದ ವಿಷಯವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಅಂತ.

ನಮ್ಮ WCG ಕಛೇರಿಯಾದ 'ಅಡವಿ ಫೀಲ್ಡ್ ಸ್ಟೇಷನ್'ನಲ್ಲಿ ಸುಮಾರು ತಿಂಗಳುಗಳಿಂದ ನಾನು ಮತ್ತು ಡಾ. ಆಶ್ವಥ್ ರವರು ನೆಲೆಯೂರಿದ್ದೇವೆ. ಅಂದು ಶಿವರಾತ್ರಿ ಹಬ್ಬ, ನಮ್ಮ ಶಿವನಹಳ್ಳಿಯ 'ರಾಮಕೃಷ್ಣ ಮಿಷನ್'ನಲ್ಲಿ ಶಿವರಾತ್ರಿಯ ಪ್ರಯುಕ್ತ ದೇವರ ಭಜನೆಯೊಂದಿಗೆ ಜಾಗರಣೆ ನಡೆಯುತ್ತಿತ್ತು. ಜಾಗರಣೆಗೆ ನಾನೇನು ಹೋಗಿಲ್ಲ ಬಿಡಿ, ಆದರೆ ಅಶ್ವಥ್ ರವರು ಅದರಲ್ಲಿ ಭಾಗವಹಿಸಿದ್ದರು. ನಾನು ಅಂದು ಬೆಳ್ಳಂಬೆಳಗ್ಗೆ ಒಂದು ಗಂಟೆಯ ಹೊತ್ತಿಗೆ ಚಿಕ್ಕಮಗಳೂರು ತಲುಪಬೇಕಿದ್ದ ಕಾರಣ, ಹೇಗಿದ್ರೂ ಬೆಂಗಳೂರಿನಿಂದ ಅಲ್ಲಿಗೆ ಪ್ರಯಾಣ ಜಾಗರಣೆಯಂತೆ ಇರುತ್ತದೆಯೆಂದು ಜಾಗರಣೆಗೆ ಹೋಗಿರಲಿಲ್ಲ. ಅಡವಿಯಲ್ಲೇ ರಾತ್ರಿಯ ಸ್ವಲ್ಪ ಸಮಯ ಕಳೆದು, ಚಿಕ್ಕಮಗಳೂರಿಗೆ ಹೊರಡುವ ಯೋಜನೆ ಮಾಡಿ,

ಅಂತೆಯೇ ಅಲ್ಲಿಯೇ ಸ್ವಲ್ಪ ಕಾಲ ಕಳೆದು ಹೊರಡಲು ಸಿದ್ಧನಾಗಿ ಹೊರಬಂದು, ಶೂ ಹಾಕಿಕೊಳ್ಳಲು ಮುಂದಾದಾಗ ನನ್ನ 'ಶೂ'ನ ಮುಂದೆ ಪ್ಲಾಸ್ಟಿಕ್ ಕವರ್ನಲ್ಲಿ ಇಟ್ಟಿದ್ದ ಅಶ್ವಥ್ ರವರ ಶೂನಲ್ಲಿ 'ಗರಂ' ಆದ 'ಗರಗಸ ಮಂಡಲ ಹಾವು' ಕಚ್ಚಲು ಸಿದ್ಧವಿದ್ದಂತಿತ್ತು. 'ಅಯ್ಯೋ ಶಿವನೆ! ಲೈಟ್ ಇಲ್ಲದೆ ಏನಾದರು ಬಂದಿದ್ದರೆ, ನನ್ನನ್ನು ಆ ಶಿವನ ಬಳಿಗೆ ಕಳುಹಿಸಲು ಬಂದಿದಿಯೋ ಈ ಹಾವು?!' ಎಂದು ಬೆಚ್ಚಿಬಿದ್ದೆ.




ಆದರೂ ನನಗೆ ಅರ್ಥವಾಗದ ವಿಷಯವೆಂದರೆ, ಸುತ್ತಲೂ 4 ಜೊತೆ 'ಕವರ್ ಇಲ್ಲದ' ಶೂ ಇದ್ದರೂ ಸಹ, ಈ ಹಾವು 'ಕವರ್'ನಲ್ಲಿ ಇಟ್ಟಿದ್ದ ಶೂನಲ್ಲಿ ಹೊಕ್ಕಿದ್ದ ವಿಷಯ! ಅಂತೂ, ಒಮ್ಮೆಲೇ ಕಂಡು ದಿಗ್ಭ್ರಮೆಗೊಂಡೆ! ನಿಧಾನವಾಗಿ ವಾಸ್ತವಕ್ಕೆ ಬಂದು, 'ಈ ಹಾವು ಯಾಕೆ 'ಕವರ್'ನಲ್ಲಿ ಇಟ್ಟಿದ್ದ ಶೂ ಒಳ ಹೊಕ್ಕಿದೆ?' ಎಂದು ಯೋಚಿಸತೊಡಗಿದೆ.

ಸರೀಸೃಪಗಳು ಶೀತರಕ್ತ ಪ್ರಾಣಿಗಳು; ಸಸ್ತನಿಗಳ ಹಾಗೆ ಇವುಗಳು ತಮ್ಮ ದೇಹದ ಉಷ್ಣಾಂಶವನ್ನು ತಾವೇ ನಿರ್ವಹಿಸಿಕೊಳ್ಳಲು ಆಗುವುದಿಲ್ಲ. ಈ ಹಾವುಗಳು ಸರೀಸೃಪಗಳ ಗುಂಪಿಗೆ ಸೇರಿರುವುದರಿಂದ, ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಾದಾಗ, ಇವುಗಳ ರಕ್ತದ ಉಷ್ಣಾಂಶವೂ ಹೆಚ್ಚಾಗುತ್ತದೆ; ಅದನ್ನು ಕಡಿಮೆ ಮಾಡಿಕೊಳ್ಳಲು, ಒಡೆದ ಹುತ್ತಗಳು, ನೀರು, ಮರ ಗಿಡಗಳ ನೆರಳು ಹಾಗೂ ತೇವಾಂಶವಿರುವ




ಸ್ಥಳಗಳನ್ನು ಹೊಕ್ಕುತ್ತವೆ. ಹಾಗೆಯೇ ವಾತಾವರಣದಲ್ಲಿ ಉಷ್ಣಾಂಶ ಕಡಿಮೆಯಾದಾಗ, ತಮ್ಮ ದೇಹದ ಉಷ್ಣಾಂಶ ಹೆಚ್ಚಿಸಿಕೊಳ್ಳಲು ಬೆಚ್ಚಗಿನ ಜಾಗಗಳನ್ನು ಹುಡುಕಿ ಹೋಗುತ್ತವೆ. ಹಾಗೆ ಹುಡುಕಿ ಬಂದ ಜಾಗವೇ ನಮ್ಮ ಶೂ ಇರಬಹುದು.

ಭಾರತದಲ್ಲಿ ಅತಿಹೆಚ್ಚು ಹಾವು ಕಡಿತದಿಂದ ಸಾವು ಸಂಭವಿಸುತ್ತಿರುವುದು ಕೇವಲ ನಾಲ್ಕು ಪ್ರಭೇದದ ಹಾವುಗಳಿಂದ. ಮೊದಲನೆಯದು, ನಮಗೆಲ್ಲರಿಗೂ ಚಿರಪರಿಚಿತವಾಗಿರುವ ನಾಗರಹಾವು, ಎರಡನೆಯದು ಕಟ್ಟುಹಾವು; ಇವು ಹೆಚ್ಚಾಗಿ ರಾತ್ರಿಯ ಸಮಯದಲ್ಲಿ ಸಕ್ರಿಯವಾಗಿರುತ್ತವೆ. ಮೂರನೆಯದು ಕೊಳಕುಮಂಡಲ; ಈ ಹಾವನ್ನು ನೋಡಿದಾಕ್ಷಣ ಎಂಥವರಿಗೂ ಒಮ್ಮೆ ಮೈ ಜುಮ್ಮೆನಿಸುವ ಅದರ ದೇಹದ ಮೇಲಿನ ಕಪ್ಪು ಸರಮಾಲೆಯಂತಹ ಚಿನ್ಹೆ, ಈ ಹಾವನ್ನು ಗುರುತಿಸಲು ಬಲು ಸಹಕಾರಿ. ನಾಲ್ಕನೆಯದು ಹಾಗು ಕೊನೆಯದ್ದೇ ನನ್ನ ಕಥೆಯಲ್ಲಿರುವ ಗರಗಸ ಮಂಡಲ ಹಾವು - ನೋಡಲು ಚಿಕ್ಕದಾದರೂ ತುಂಬಾ ಅಪಾಯಕಾರಿ.



ಈ ಪಟ್ಟಿಯಲ್ಲಿ ಅತಿ ವಿಷಕಾರಿಯಾದ ಕಾಳಿಂಗ ಸರ್ಪ ಇಲ್ಲ ಏಕೆ ಅಂತ ಯೋಚನೆ ಮಾಡ್ತಿದ್ದೀರಾ? ಕಾಳಿಂಗ ಸರ್ಪ ಹಾವು ವಿಶ್ವದ ಅತ್ಯಂತ ದೊಡ್ಡ ವಿಷಕಾರಿ ಹಾವು ಹೌದು, ಆದರೆ ಇದರ ಕಡಿತದಿಂದ ಆಗಿರುವ ಸಾವು ಬೆರಳೆಣಿಕೆಯಷ್ಟು ಮಾತ್ರ. ಅದಕ್ಕೆ ಇದನ್ನು "Big Fours of India" ಪಟ್ಟಿಗೆ ಸೇರಿಸಿಲ್ಲ. ಗರಗಸ ಮಂಡಲ ಹಾವುಗಳು ತಮಗೆ ಅಪಾಯ ಎದುರಾದಾಗ, ತಮ್ಮ ದೇಹವನ್ನು ಸುತ್ತು ಸುತ್ತಾಗಿ (C ಅಥವಾ ಸಂಖ್ಯೆ 8 ಆಕಾರದಲ್ಲಿ) ಮಡಚಿಕೊಂಡು ತಲೆಯನ್ನು ಮಧ್ಯದಲ್ಲಿ ಇಡುತ್ತವೆ. ಈ ಸ್ಥಿತಿಯಲ್ಲಿ ಅವು ಬಹಳ ಬೇಗ ಕಚ್ಚುವ ಸಾಧ್ಯತೆ ಇರುವುದರಿಂದ ದೂರ ಇರುವುದು ಅತ್ಯುತ್ತಮ.




ಈ ಹಾವುಗಳು ತಮ್ಮ ದೇಹದ ಗರಗಸದಂತಿರುವ ಹುರುಪೆಗಳನ್ನು ಉಜ್ಜುವ ಮೂಲಕ "ಶಶಶ" ಎಂಬ ಶಬ್ದವನ್ನು ಉಂಟುಮಾಡಿ ಎಚ್ಚರಿಕೆ ನೀಡುತ್ತವೆ.

ಇವುಗಳ ವಿಷ ಹಿಮೋಟಾಕ್ಸಿಕ್ ಸ್ವಭಾವ ಹೊಂದಿದ್ದು, 'ರಕ್ತ ಹೆಪ್ಪುಗಟ್ಟುವ ವ್ಯವಸ್ಥೆ' ಯನ್ನು ಗಂಭೀರವಾಗಿ ಹಾನಿಗೊಳಿಸುತ್ತದೆ. ವಿಷದ ಪರಿಣಾಮವಾಗಿ ಆರಂಭದಲ್ಲಿ ರಕ್ತ ಹೆಪ್ಪುಗಟ್ಟುವ ಕ್ರಿಯೆ ಸಕ್ರಿಯವಾಗುವಂತೆ ಕಾಣಿಸಿದರೂ, ನಂತರ ಹೆಪ್ಪುಗಟ್ಟುವ ಅಂಶಗಳು ಕಡಿಮೆಯಾಗುವುದರಿಂದ ರಕ್ತ ಹೆಪ್ಪುಗಟ್ಟುವ ಸಾಮರ್ಥ್ಯ ಕುಂದುತ್ತದೆ. ಇದರ ಪರಿಣಾಮವಾಗಿ ಆಂತರಿಕ ಹಾಗೂ ಬಾಹ್ಯ ರಕ್ತಸ್ರಾವ ಸಂಭವಿಸಬಹುದು.

ಮನುಷ್ಯರಲ್ಲಿ ಹಾವು ಕಚ್ಚಿದ ನಂತರ ಕೆಲವು ನಿಮಿಷಗಳಿಂದ ಕೆಲವು ಗಂಟೆಗಳೊಳಗೆ ನೋವು, ಊತ, ಒಸಡು ಮತ್ತು ಮೂಗಿನಿಂದ ರಕ್ತಸ್ರಾವ, ವಾಂತಿ, ತಲೆ ತಿರುಗುವಿಕೆ ಮುಂತಾದ ಲಕ್ಷಣಗಳು ಕಾಣಿಸಬಹುದು. ತಕ್ಷಣ ಚಿಕಿತ್ಸೆ ಪಡೆಯುವುದು ಅತ್ಯವಶ್ಯಕ, ಇಲ್ಲದಿದ್ದರೆ ಜೀವಾಪಾಯ ಉಂಟಾಗಬಹುದು.

ಹಾವುಗಳು ವಿಷ ಶೇಖರಿಸಿ ಇಟ್ಟುಕೊಂಡಿರುವುದು ಮನುಷ್ಯರಿಗೆ ಕಚ್ಚಲೆಂದು ಅಲ್ಲ. ಬದಲಿಗೆ ತನ್ನ ಆಹಾರ ಸಂಪಾದನೆಗಾಗಿ. ತನ್ನ ಬೇಟೆಯಾದ ಪ್ರಾಣಿಗಳನ್ನು ನಿಷ್ಕ್ರಿಯಗೊಳಿಸಿ, ಸೇವಿಸಲು. ಮನುಷ್ಯರಾದ ನಾವು ತಿಳಿದೋ, ತಿಳಿಯದೆಯೋ ಆಕಸ್ಮಿಕವಾಗಿ ಸಂಭವಿಸುವ ಘಟನೆಗಳಿಂದ ಅವುಗಳ ವಿಷಕ್ಕೆ ಬಲಿಯಾಗುತ್ತಿದ್ದೇವೆ ಅಷ್ಟೆ. ಇನ್ನೊಂದು ವಿಷಯ - ಈ ವಿಷಕಾರಿ ಹಾವುಗಳು ಕಚ್ಚಿದರೆ ಸಾವು ಕಟ್ಟಿಟ್ಟ ಬುತ್ತಿ ಅಂತ ಏನಿಲ್ಲ; ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಸೇರಿಸಿ, ಪ್ರತ್ಯೌಷಧಿ ಪಡೆದರೆ ಸಾಕು, ಯಮಧರ್ಮ ನಮ್ಮ ಕೊರಳಿಗೆ ಹಾಕಿರುವ ಚಾಟಿಯಿಂದ ತಪ್ಪಿಸಿಕೊಳ್ಳಬಹುದು. ಆದರೆ ಏನ್ ಮಾಡೋದು ಹೇಳಿ? ನಮ್ಮ ಹೆಚ್ಚಿನ ಜನ ಮಂತ್ರ ಹಾಕಿಸಿ, ತಂತ್ರಮಾಡಿಸಿ ವಾಸಿ ಮಾಡಿಸ್ಕೋತೀವಿ ಅಂತ ಹೋಗಿ ಸಾಯ್ತಾರೆ.

**ಹಾವು ಕಚ್ಚಿದಾಗ ಮಾಡಬೇಕಾದ ಪ್ರಥಮ ಚಿಕಿತ್ಸೆ:**

1. ಶಾಂತವಾಗಿರಿ: ಭಯವು ವಿಷದ ಪರಿಣಾಮವನ್ನು ಹೆಚ್ಚಿಸುತ್ತದೆ.
2. 'ಹಾವು ಕಡಿತ'ಕ್ಕೊಳಗಾದ ಭಾಗವನ್ನು ಹೆಚ್ಚು ಅಲುಗಾಡದಂತೆ ಇರಿಸಿ.
3. ಕಚ್ಚಿದ ಭಾಗದಲ್ಲಿ ಆಭರಣಗಳು ಮತ್ತು ಬಿಗಿಯಾದ ಬಟ್ಟೆಗಳು ಇದ್ದಲ್ಲಿ ತೆಗೆದುಹಾಕಿ.
4. ಸಾಧ್ಯವಾದಷ್ಟೂ ಬೇಗ ಹತ್ತಿರದ ಆಸ್ಪತ್ರೆ ಅಥವಾ ವೈದ್ಯಕೀಯ ಸೌಲಭ್ಯ ಇರುವ ಕಡೆ ಸಾಗಿಸಿ.
5. ರೋಗಿಯನ್ನು ಮಲಗಿಸಿ, ಹಾವು ಕಚ್ಚಿದ ಅಂಗವನ್ನು ಅಚಲವಾಗಿ, ಹೃದಯ ಮಟ್ಟದಲ್ಲಿ ಅಥವಾ ಹೃದಯ ಮಟ್ಟಕ್ಕಿಂತ ಸ್ವಲ್ಪ ಕೆಳಗೆ ಇಡಿ.
6. ಕಚ್ಚಿದ ಸ್ಥಳವನ್ನು ಒರೆಸಬೇಡಿ ಅಥವಾ ತೊಳೆಯಬೇಡಿ.

**ಹಾವು ಕಚ್ಚಿದಾಗ ಮಾಡಬಾರದಂತಹ ಕೆಲಸಗಳು:**

1. ವಿಷವನ್ನು ಬಾಯಲ್ಲಿ ಹೀರುವುದು.
2. ಕಚ್ಚಿದ ಭಾಗದ ಮೇಲೆ ಐಸ್ ಅನ್ನು ಇಡುವುದು.
3. ಬಲವಂತವಾಗಿ ನೀರು ಅಥವಾ ಯಾವುದೇ ಪಾನೀಯಗಳನ್ನು ಕುಡಿಸುವುದು (ಮದ್ಯ / ಕಾಫಿ ಕೊಡಬಾರದು).
4. ಕಚ್ಚಿದ ಭಾಗದ ಮೇಲೆ ಗಟ್ಟಿಯಾಗಿ ರಕ್ತ ಸಂಚಲನ ಆಗದಂತೆ ಬಟ್ಟೆ ಅಥವಾ ದಾರ ಕಟ್ಟುವುದು.
5. ಮಂತ್ರ ಹಾಕಿಸಲು ಪೂಜಾರಿ/ಮಂತ್ರವಾದಿ ಬಳಿ ಕರೆದೊಯ್ಯುವುದು.
6. ಕಚ್ಚಿದ ಭಾಗದಲ್ಲಿ ಯಾವುದೇ ರೀತಿಯ ಕತ್ತರಿಸುವುದು (X ಚಿನ್ಹೆಯಂತೆ ಕೊಯ್ಯುವುದು).
7. ಹಾವನ್ನು ಹಿಡಿಯಲು ಅಥವಾ ಕೊಲ್ಲಲು ಪ್ರಯತ್ನಿಸುವುದು.



ಈಗ ಚಳಿಯಿರೋದ್ರಿಂದ ಹಾವುಗಳು ನಿಮ್ಮ ಮನೆಯ ಸುತ್ತಮುತ್ತಲೂ ಬರಬಹುದು. ಯಾವಾಗಲೂ ಮನೆಯ ಬಾಗಿಲು ಮುಚ್ಚಿರಿ; ಶೂ, ಚಪ್ಪಲಿ ಹಾಕಿಕೊಳ್ಳುವ ಮುನ್ನ ತೀಕ್ಷ್ಣವಾಗಿ ನೋಡಿ, ನಂತರ ಧರಿಸಿ. ಮನೆಯ ಸುತ್ತಮುತ್ತಲೂ ಶುಚಿಯಾಗಿಡಿ; ಶುಚಿಯಿಲ್ಲದಿದ್ದರೆ, ಇಲಿಗಳು ಮನೆಹೊಕ್ಕುತ್ತವೆ; ಅವುಗಳನ್ನು ಹುಡುಕಿಕೊಂಡು, ಹಾವುಗಳೂ ಸಹ ಬರುತ್ತವೆ. ದಯವಿಟ್ಟು ಯಾರೂ ಸಹ ಹಾವುಗಳನ್ನು ಕಂಡಾಗ ಕೊಲ್ಲಬೇಡಿ. ಅವುಗಳು ನಮಗೆ ಮಾರಕವಲ್ಲ, ಆಹಾರ ಜಾಲದಲ್ಲಿ ಅವು ಮುಖ್ಯ ಪಾತ್ರವಹಿಸುತ್ತಿವೆ. ಹಾವು ಕಂಡಲ್ಲಿ ನಿಮ್ಮ ಸುತ್ತಮುತ್ತಲಿನ ಉರಗರಕ್ಷಕರನ್ನು ಸಂಪರ್ಕಿಸಿ.

ಇದರ ಬಗ್ಗೆ ಅರಿವು ಮೂಡಿಸಲು WCG ಕಡೆಯಿಂದ ನಾವೂ ಸಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಇತ್ತೀಚಿಗೆ ಬೆಂಗಳೂರಿನ ಸುತ್ತಮುತ್ತ ಕಂಡುಬರುವ ಸುಮಾರು 23 ಪ್ರಭೇದದ ಸಾಮಾನ್ಯ ಹಾವುಗಳ ಬಗ್ಗೆ ಒಂದು ಕಿರುಹೊತ್ತಗೆಯನ್ನು ಹೊರತಂದಿದ್ದೇವೆ. ನಿಮಗೆ ಈ ಕಿರುಹೊತ್ತಗೆ ಬೇಕಾದಲ್ಲಿ, ಇದೇ ಪತ್ರಿಕೆಯ ‘ನೀವೂ ಕಾನನಕ್ಕೆ ಬರೆಯಬಹುದು’ ಅಂಕಣದಲ್ಲಿರುವ ವಿಳಾಸವನ್ನು ಸಂಪರ್ಕಿಸಿ.

ಹಾವುಗಳ ಪ್ರಾಮುಖ್ಯತೆ ಬಗ್ಗೆ ಚರ್ಚಿಸ್ತಾ, ಈ ಲೇಖನದಲ್ಲಿ ಇದ್ದ ಹಾವನ್ನ ನಾವು ಮರತೇಬಿಟ್ವಿ.

### ಮುಂದೇನಾಯ್ತು ಶೂ ಕವರ್ನಲ್ಲಿದ್ದ ಹಾವು?





ಇದರ ಬಗ್ಗೆ, ಮೇಲೆ ತಿಳಿಸಿರುವ ವಿಷಯಗಳನ್ನು ತಿಳಿದಿದ್ದ ನಾನು, ಅದರಿಂದ ಆಗಬಹುದಾದ ತೊಂದರೆಗಳನ್ನು ಬಲ್ಲವನಾಗಿದ್ದೆ. ಅದಕ್ಕೆ ಆ ಹಾವು ಕವರ್-ನಿಂದ ಎಲ್ಲೂ ಹೊರಹೋಗದಂತೆ ಕಟ್ಟಿ, ಗಾಳಿಯಾಡಲು ಸಾಸಿವೆ ಕಾಳಿನಷ್ಟು ರಂಧ್ರಮಾಡಿ, ಅಶ್ವಥ್ ಅವರಿಗೆ ವಿಷಯ ತಿಳಿಸಿದೆ. ಈ ವಿಷಯ ತಿಳಿದ ಅವರ ಮನಸ್ಸು ಇದರತ್ತ ಸೆಳೆಯಿತು ಎಂಬುದು, ಅವರು ನನಗೆ ಹೇಳಿದಾಗ ತಿಳಿಯಿತು. ಜಾಗರಣೆಯ ಭಜನೆಯ ವಿರಾಮದ ಸಮಯದಲ್ಲಿ ಅಡವಿಗೆ ಬಂದು, ಕವರ್ನಲ್ಲಿದ್ದ ಹಾವನ್ನು ಹೊರತೆಗೆದು ಅದರ ಸುಂದರ ಛಾಯಾಚಿತ್ರಗಳನ್ನು ಸೆರೆಹಿಡಿದು ಅದರ ಆವಾಸ ಸ್ಥಳಕ್ಕೆ ವಾಪಸ್ ಬಿಟ್ಟರಂತೆ. ಈ ಲೇಖನದಲ್ಲಿರುವ ಛಾಯಾಚಿತ್ರಗಳು ಅದರದ್ದೇ ನೋಡಿ.

**ಲೇಖನ: ಧನರಾಜ್ ಎಂ.**
**ಬೆಂಗಳೂರು ಜಿಲ್ಲೆ**

© ಧನುಷ್ ಆರ್. ಎಸ್.






# ಪ್ರಕೃತಿಯ ಮಡಿಲಲ್ಲಿ "ಕೆಂಪು ಹರಟೆ ಮಲ್ಲ" ಹಕ್ಕಿಯ ಮೌನದ ಮಾತು

ಕುರುಚಲು ಕಾಡಿನ ಚಳಿಗಾಲದ ಬೆಳಗು ಎಂದರೆ ಅದು ಮೌನ ಮತ್ತು ಮಂಜಿನ ಜುಗಲ್‌ಬಂದಿ. ಎಲೆಗಳ ತುದಿಯಲ್ಲಿ ಇಬ್ಬನಿಯ ಹನಿಗಳು ಮುತ್ತಿನಂತೆ ತೂಗಾಡುತ್ತಿರುತ್ತವೆ. ಅಬ್ಬಾ... ಎಂತಹ ಚಳಿ! ಇಂದು ಬೆಳಿಗ್ಗೆ ಪೊದೆಯಿಂದ ಹೊರಬರಲು ಮನಸ್ಸೇ ಬರುತ್ತಿಲ್ಲ. ರೆಕ್ಕೆಗಳನ್ನು ಮುದುಡಿಕೊಂಡು, ಬೆಚ್ಚಗೆ ಕುಳಿತಿರೋಣ ಎಂದು ಎನಿಸಿದ್ದು ಸುಳ್ಳಲ್ಲ. ಸುತ್ತಲೂ ದಟ್ಟವಾದ ಮಂಜು, ಗಾಳಿಯಲ್ಲಿ ಹರಿತವಾದ ಕತ್ತಿಯಂತೆ ಮೈಯನ್ನು ಇರಿಯುವ ತಂಪು. ಈ ದಿನವನ್ನು ಹೊಸದಾಗಿ ಸ್ವಾಗತಿಸಬೇಕಲ್ಲವೇ? ಮೈಮೇಲೆ ಅಂಟಿದ ನಿನ್ನೆಯ ಧೂಳನ್ನು, ಆಲಸ್ಯವನ್ನು ತೊಳೆದುಕೊಳ್ಳದಿದ್ದರೆ ಈ ದಿನಕ್ಕೆ ಅರ್ಥವೆಲ್ಲಿದೆ? ಹಾಗಾಗಿಯೇ, ನಾನು ಮೆಲ್ಲನೆ ಹಾರಿ ಸ್ನಾನ ಮಾಡೋಣ ಅಂತಾ, ಚಂದ್ರು ಶಿಡೇನೂರ ತೋಟದಲ್ಲಿ ನಿಂತ ನೀರಿನ ಬಳಿ ಬಂದೆ. ಅಯ್ಯೋ! ಅಲ್ಲಿ ಶಶಿ ಮಾರುದ್ದ ಲೆನ್ಸ್ ಹಿಡ್ಕೊಂಡು ನನ್ನ ಪೊಟೋ ತೆಗೆಯೋಕೆ ಕೂತಿದ್ದಾನೆ! ನನಗೋ ನಾಚಿಕೆ ಬೇರೆ, ಗಿಡದ ಮರೆಗಿದ್ದ ನೀರಿನ ಗುಂಡಿಯತ್ತ ಹಾರಿ ಬಂದು ಸ್ನಾನಕ್ಕೆ ಸಿದ್ದನಾದೆ.

ಅಲ್ಲಿನ ನೀರು ಎಷ್ಟು ತಣ್ಣಗಿತ್ತೆಂದರೆ, ಇಡೀ ಆಕಾಶವೇ ಹೆಪ್ಪುಗಟ್ಟಿ ಆ ನಿಂತ ನೀರಿನ ಗುಂಡಿಗೆ ಇಳಿದಿದೆಯೇನೋ ಎಂಬಂತಿತ್ತು. ಮೊದಲು ಒಂದು ಕ್ಷಣ ಹಿಂಜರಿದೆ. ಒಂದು ಕಾಲಿಟ್ಟೆ... 'ಅಮ್ಮಾ!' ಎನಿಸುವಂತಹ ನಡುಕ ಮೈಯೆಲ್ಲಾ ವ್ಯಾಪಿಸಿತು. ಆದರೂ ಧೈರ್ಯ ಮಾಡಿ ಒಮ್ಮೆಲೇ ಮುಳುಗು ಹಾಕಿದೆ. ರೆಕ್ಕೆಗಳನ್ನು ಬಡಿಯುತ್ತಾ, ನೀರಿನ ಹನಿಗಳನ್ನು ಚಿಮ್ಮಿಸುತ್ತಾ ಮಿಂದು ಎದ್ದಾಗ, ಆ ಚಳಿ ಕೂಡ ಒಮ್ಮೆಲೇ ಮಾಯವಾಗಿ, ಎದೆಯೊಳಗೆ

ಯಾವುದೋ ನವಚೈತನ್ಯ ಹರಿದಂತಾಯಿತು. ಸ್ನಾನ ಮುಗಿಸಿ ಈ ಒಣಗಿದ ರೆಂಬೆಯ ಮೇಲೆ ಬಂದು ಕುಳಿತಿದ್ದೇನೆ. ನನ್ನ ಹಸಿ ಹಸಿ ರೆಕ್ಕೆಗಳನ್ನು ಬಿಡಿಸಿ ಸೂರ್ಯನ ಪ್ರೀತಿಯ ಸ್ಪರ್ಶಕ್ಕಾಗಿ ಕಾಯುತ್ತಿದ್ದೇನೆ. ಆ ಬಿಸಿಲ ಕಿರಣಗಳು ನನ್ನ ಪ್ರತಿ ರೆಕ್ಕೆಯನ್ನು ಸ್ಪರ್ಶಿಸಿದಾಗ, ಹಬೆ ಏಳುವಂತೆ ಅನ್ನಿಸುತ್ತಿದೆ. ಚಳಿಯಲ್ಲಿ ಸ್ನಾನ ಮಾಡುವುದು ಕಷ್ಟವಿರಬಹುದು, ಆದರೆ ಸ್ನಾನದ ನಂತರದ ಈ ನಿರಾಳತೆ ಇದೆಯಲ್ಲ, ಇಂತಹ ಆನಂದ ಬೇರೊಂದಿಲ್ಲ. ಸೂರ್ಯನ ಶಾಖ ನನ್ನ ಒದ್ದೆ ರೆಕ್ಕೆಗಳನ್ನು ಸ್ಪರ್ಶಿಸಿದಾಗ ಆಗುವ ಆ ಆನಂದವಿದೆಯಲ್ಲ, ಅದು ಯಾವ ರಾಜವೈಭೋಗಕ್ಕೂ ಸಮನಲ್ಲ. ಬದುಕೂ ಹಾಗೆಯೇ ಅಲ್ಲವೇ? ಸಂಕಷ್ಟದ ಚಳಿಯನ್ನು ಎದುರಿಸಿದಾಗಲೇ, ಸುಖದ ಬಿಸಿಲು ನಮಗೆ ಹೆಚ್ಚು ಮಧುರವಾಗಿ ಕಾಣುವುದು. ಈಗ ನಾನು ಹಗುರವಾಗಿದ್ದೇನೆ, ಶುಭ್ರವಾಗಿದ್ದೇನೆ. ಈಗ ನನ್ನ ಹಾಡು ಮತ್ತಷ್ಟು ಸ್ಪಷ್ಟವಾಗಿ, ಮತ್ತಷ್ಟು ಲವಲವಿಕೆಯಿಂದ ಕೇಳಿಸುತ್ತದೆ.




ಅಂದಹಾಗೆ ನನ್ನ ಹೆಸರು ಹೇಳೋದೆ ಮರೆತೆ ನೋಡಿ. ನಾನು 'ಕೆಂಪು ಹರಟೆ ಮಲ್ಲ', 'ಕೆಂಪು ಗೀಜಗಾರ್ಲು ಹಕ್ಕಿ' ಅಥವಾ 'ಚೀರಪಕ್ಷಿ' ಅಂತಲೂ ನನ್ನನ್ನು ಕರೆಯುತ್ತಾರೆ; ಇಂಗ್ಲೀಷಿನಲ್ಲಿ ನನಗೆ **ಟಾನಿ ಬೆಲ್ಲೀಡ್ ಬ್ಯಾಬ್ಲರ್** (*Tawny-bellied Babbler*), **ರೂಫಸ್ ಬೆಲ್ಲೀಡ್ ಬ್ಯಾಬ್ಲರ್** (*Rufous bellied Babbler*) ಅಥವಾ **ವೈಟ್ ಥ್ರೋಟೆಡ್ ಬ್ಯಾಬ್ಲರ್** (*White-throated Babbler)* ಎಂಬ ಹೆಸರುಗಳಿವೆ, ಪಕ್ಷಿ ತಜ್ಞರು ನನ್ನನ್ನು **ಡುಮೇಟಿಯಾ ಹೈಪರಿತ್ರಾ** (*Dumetia hyperythra*) ಎಂದು ವೈಜ್ಞಾನಿಕವಾಗಿ ಹೆಸರಿಸಿ, **ಪಾಸ್ಸರಿಫಾರ್ಮಿಸ್** (*Passeriformes*) ಗಣದ, **ಟಿಮಾಲಿಡೇ** (*Timaliidae*) ಕುಟುಂಬಕ್ಕೆ ಸೇರಿಸಿದ್ದಾರೆ.

ನಾನು ಈ ವಿಶಾಲವಾದ ಕುರುಚಲು ಕಾಡಿನ ಒಂದು ಪುಟ್ಟ ಜೀವಿ. ನನ್ನನ್ನು ನೀವು ನೋಡುತ್ತಿದ್ದೀರಾ? ಈ ಒಣಗಿದ ರೆಂಬೆಯ ಮೇಲೆ ನಾನು ಎಷ್ಟು ಆರಾಮವಾಗಿ ಕುಳಿತಿದ್ದೇನೆ ಎಂದರೆ, ಇಡೀ ಪ್ರಪಂಚದ ಸೌಂದರ್ಯವೇ ನನ್ನ ಪುಟ್ಟ ರೆಕ್ಕೆಗಳ ಕೆಳಗೆ ಅಡಗಿದಂತಿದೆ. ನನ್ನ ಮೈಬಣ್ಣವನ್ನು ಒಮ್ಮೆ ನೋಡಿ. ನನ್ನ ಎದೆಯ ಭಾಗಕ್ಕೆ ಸೂರ್ಯನೇ ಬಣ್ಣ ಬಳೆದಿದ್ದಾನೋ ಏನೋ ಎಂಬಂತೆ ಕಿತ್ತಳೆ ಬಣ್ಣ ಹೊಳೆಯುತ್ತಿದೆ. ಈ ಬಿಳಿ ಕಂಠ, ನಾನು ಹಾಡುವ ಹಾಡಿಗೆ ಒಂದು ಅಚ್ಚ ಶುಭ್ರ ಗೌರವದಂತೆ ಕಾಣುವುದಿಲ್ಲವೇ? ನೀವು ನನ್ನನ್ನು 'ಹರಟೆಮಲ್ಲ' ಎನ್ನುವುದು ಸತ್ಯ; ಹೌದು! ನಾನು ನನ್ನ ಗೆಳೆಯರೊಂದಿಗೆ ಸದಾ ಚಿಲಿಪಿಲಿ ಅಂತ ಮಾತನಾಡುತ್ತಲೇ ಇರುತ್ತೇನೆ. ಒಂಟಿತನ ನನಗಿಷ್ಟವಿಲ್ಲ; ನಾವು ಗುಂಪಾಗಿ ಸಂಭ್ರಮಿಸುವವರು. ನನ್ನ ಬದುಕು ತುಂಬಾ ಸರಳ. ನಾನು ಎತ್ತರದ ಆಕಾಶದಲ್ಲಿ ಹಾರುವ ಹದ್ದಲ್ಲ, ಅತಿ ದೂರದೂರಿಗೆ ವಲಸೆ ಹೋಗುವ ಹಕ್ಕಿಯೂ ನಾನಲ್ಲ. ಈ ಕುರುಚಲು ಗಿಡಗಳು, ಈ ಒಣಗಿದ ಮರದ ಕೊಂಬೆಗಳು ಮತ್ತು ನೆಲದ ಮೇಲೆ ಸಿಗುವ ಪುಟ್ಟ ಹುಳ-ಹಪ್ಪಟೆಗಳೇ ನನ್ನ ಪ್ರಪಂಚ. ಗದ್ದಲದ ಪ್ರಪಂಚಕ್ಕೆ ನಾನು ಕಾಣಿಸದಿರಬಹುದು, ಆದರೆ ನಾನು ಇಲ್ಲದಿದ್ದರೆ ಈ ಕಾಡಿನ ಸಂಗೀತ ಅಪೂರ್ಣ.

ನಾನು ಗುಬ್ಬಚ್ಚಿ ಗಾತ್ರದ ಕಂದು ಕಿತ್ತಳೆ ಬಣ್ಣದ ಹಕ್ಕಿ; ಗದ್ದ, ಕತ್ತು, ಎದೆ, ಹೊಟ್ಟೆ ಹಾಗೂ ತಳಭಾಗ ತಿಳಿ ಕಿತ್ತಳೆ. ಕಂಠವು ಬಿಳುಪಾಗಿದೆ, ಕೊಕ್ಕು ತಿಳಿ ಕಿತ್ತಳೆ, ಬಾಲ ಹಾಗೂ ಬೆನ್ನು ಕಂದು ಮಿಶ್ರಿತ ಹಸಿರು, ಹೊಳೆಯುವ ತಿಳಿ ಬಣ್ಣದ ಕಣ್ಣುಗಳಿವೆ. ಕಾಲುಗಳು ತಿಳಿ ಗುಲಾಬಿ ಬಣ್ಣದಿಂದ ಕೂಡಿವೆ. ನನ್ನ ಆವಾಸಸ್ಥಾನ ಕೃಷಿಭೂಮಿ, ಹುಲ್ಲುಗಾವಲು, ಕುರುಚಲು ಕಾಡುಗಳ ಪೊದೆಗಳಾಗಿವೆ. ನಾನು 'ಸ್ವೀಚ್........ ಸ್ವೀಚ್........ಸ್ವೀಚ್........' ಎಂದು ಸುಮಧುರವಾಗಿ ಕೂಗುವೆ. ನಾನು ಕೀಟಾಹಾರಿಯಾಗಿದ್ದು, ನನ್ನ ಆಹಾರ ಹುಡುಕುವ ಶೈಲಿ ಬಹಳ ವಿಶಿಷ್ಟವಾಗಿದೆ. ನೆಲದ ಮೇಲೆ ಬಿದ್ದಿರುವ ಒಣಎಲೆಗಳನ್ನು ನನ್ನ ಕೊಕ್ಕಿನಿಂದ ಮಗುಚಿ ಹಾಕಿ, ಅದರ ಕೆಳಗಿರುವ ಕೀಟಗಳನ್ನು ಪತ್ತೆಹಚ್ಚಿ ತಿನ್ನುತ್ತೇನೆ. ಹಾಗೆಯೇ ಪೊದೆಗಳ ಕೆಳಭಾಗದಲ್ಲಿ ಹಾರಾಡುತ್ತಾ ಆಹಾರ ಹುಡುಕುತ್ತಿರುತ್ತೇನೆ. ನನ್ನ ಊಟದ ಮೆನುವಿನಲ್ಲಿ ಸಣ್ಣ ಜೇಡಗಳು, ಮಿಡತೆಗಳು, ಮರಿಕೀಟಗಳು, ಇರುವೆಗಳು ಮತ್ತು ಇತರ ಸಣ್ಣ ಪುಟ್ಟ ಕೀಟಗಳು ಸೇರಿವೆ. ಅಪರೂಪಕ್ಕೆ ನಾನು ಕೆಲವು ಹೂವುಗಳ ಮಕರಂದವನ್ನೂ ಸೇವಿಸುವುದುಂಟು. ಅದರಲ್ಲೂ 'ಮುತ್ತುಗ'ದ ಹೂವು ಅಂದರೆ ಪಂಚಪ್ರಾಣ. ನಾನು ಹೆಚ್ಚಾಗಿ ಗುಂಪುಗಳಲ್ಲಿ 6-10 ಸಹೋದರ ಸಹೋದರಿಯರೊಂದಿಗೆ ಆಹಾರ ಅರಸುತ್ತಿರುತ್ತೇನೆ.




ನಮ್ಮ ಸಂತಾನೋತ್ಪತ್ತಿಯ ಕಾಲವು ಸಾಮಾನ್ಯವಾಗಿ ಮಳೆಗಾಲದ ಸಮಯವಾಗಿದ್ದು, 'ಮೇ' ತಿಂಗಳಿನಿಂದ 'ಸೆಪ್ಟೆಂಬರ್'ವರೆಗೆ ನೆಲಕ್ಕೆ ಬಹಳ ಸನಿಹದಲ್ಲಿ ದಟ್ಟವಾದ ಪೊದೆಗಳ ನಡುವೆ ಗೂಡು ಕಟ್ಟುತ್ತೇವೆ. ನಮ್ಮ ಗೂಡು ಚೆಂಡಿನ ಆಕಾರದಲ್ಲಿ ಇರುತ್ತದೆ. ಗೂಡನ್ನು ಒಣಗಿದ ಹುಲ್ಲು ಅಥವಾ ಬಿದಿರಿನ ಎಲೆಗಳಿಂದ ಮಾಡಿ, ಗೂಡಿನ ಪಕ್ಕದಲ್ಲಿ ಪ್ರವೇಶ ದ್ವಾರವನ್ನು ಮಾಡಿಕೊಂಡಿರುತ್ತೇನೆ. 3 ರಿಂದ 4 ಬಿಳಿ ಅಥವಾ ಕೆನೆ ಬಣ್ಣವಿರುವ, ಮೇಲೆ ಕೆಂಪು-ಕಂದು ಬಣ್ಣದ ಸಣ್ಣ ಚುಕ್ಕೆಗಳನ್ನು ಹೊಂದಿರುವ ಮೊಟ್ಟೆಗಳನ್ನು ಇಡುತ್ತೇವೆ. ಗೂಡು ಕಟ್ಟುವುದು ಮತ್ತು ಮರಿಗಳಿಗೆ ಆಹಾರ ತಂದುಕೊಡುವ ಕೆಲಸವನ್ನು ನಾವು ದಂಪತಿಗಳಿಬ್ಬರೂ ಸಮಾನವಾಗಿ ನಿರ್ವಹಿಸುತ್ತೇವೆ. ಕೆಲವು ಸಲ ಕೋಗಿಲೆ, ಚಾಣದಂತಹ ಇತರ ಹಕ್ಕಿಗಳ ಮರಿಗಳನ್ನು ಸಾಕಿ ಬೆಳೆಸುತ್ತೇವೆ.

ನಾನು ನಿಮ್ಮಂತೆ ಅತಿ ಆಸೆಯವನಲ್ಲ. ನನಗೆ ಬೇಕಾಗಿರುವುದು ಕೇವಲ ಒಂದು ಸುರಕ್ಷಿತ ಪೊದೆ ಮತ್ತು ಕುಡಿಯಲು ಒಂದಿಷ್ಟು ಶುದ್ಧ ನೀರು. ಈ ಪ್ರಕೃತಿ ನಮಗೆಷ್ಟೋ ನೀಡಿದೆ, ಅದನ್ನು ಉಳಿಸಿಕೊಳ್ಳೋಣ. ನನ್ನ ಈ ಪುಟ್ಟ ಬಣ್ಣದ ನೋಟ, ನಿಮ್ಮ ಮುಖದಲ್ಲಿ ಒಂದು ಸಣ್ಣ ಮಂದಹಾಸ ಮೂಡಿಸಿದರೆ, ಅಷ್ಟೇ ಸಾಕು ನನಗೆ, ಬರುತ್ತೇನೆ, ಬಾಯ್ ಬಾಯ್! ನನ್ನ ಗೆಳೆಯರು ಪೊದೆಯ ಆ ಕಡೆಯಿಂದ ಕರೆಯುತ್ತಿದ್ದಾರೆ. ಮತ್ತೆ ಸಿಗೋಣ...

**ಲೇಖನ: ಶಶಿಧರಸ್ವಾಮಿ ಆರ್. ಹಿರೇಮಠ**
**ಹಾವೇರಿ-ಜಿಲ್ಲೆ**

© ಶಶಿಧರಸ್ವಾಮಿ ಆರ್. ಹಿರೇಮಠ






## ಹುಳಿ ಸೊಪ್ಪು ಮರ

### Ironwood tree

### *Memecylon umbellatum*

ಹುಳಿ ಸೊಪ್ಪು ಮರವು ಸಾಮಾನ್ಯವಾಗಿ ಭಾರತ, ಶ್ರೀಲಂಕಾ, ಅಂಡಮಾನ್-ನಿಕೋಬಾರ್ ದ್ವೀಪಗಳು, ಮ್ಯಾನ್ಮಾರ್ ಮತ್ತು ದಕ್ಷಿಣ ಏಷ್ಯಾದ ಕೆಲವು ಭಾಗಗಳಲ್ಲಿ ಕಾಣಿಸುತ್ತದೆ. ಹುಳಿ ಸೊಪ್ಪು ಮರವು ಒಂದು ಸಣ್ಣ ಮರವಾಗಿದೆ. ಇದು ಸುಮಾರು 6 ಮೀಟರ್ ಎತ್ತರ ಬೆಳೆಯಬಲ್ಲದು. ಇದರ ತೊಗಟೆ ಒರಟಾಗಿದೆ.

ಇದರ ಎಲೆಗಳು ಸುಮಾರು 5 ಸೆಂಟಿಮೀಟರ್ ಉದ್ದವಿದ್ದು, ಸರಳ ಎಲೆಗಳಾಗಿವೆ. ಸುವಾಸನೆಯಿಂದ ಕೂಡಿದ ನೀಲಿ ಬಣ್ಣದ ಕಿರು ಹೂಗಳು ಗುಚ್ಛಗುಚ್ಛವಾಗಿ ಇರುತ್ತವೆ. ಇದರ ಹಣ್ಣುಗಳು ನೇರಳೆ ಬಣ್ಣದಲ್ಲಿದ್ದು, ಸುಮಾರು ಒಂದು ಸೆಂಟಿಮೀಟರ್ ಗಾತ್ರ ಇರುತ್ತವೆ. ಸಾಮಾನ್ಯವಾಗಿ ಫೆಬ್ರುವರಿಯಿಂದ ಮಾರ್ಚ್ ತಿಂಗಳಲ್ಲಿ ಹೂ ಬಿಡುತ್ತದೆ (ಪ್ರದೇಶಾನುಸಾರ ಸಮಯ ಬದಲಾಗಬಹುದು). ಇದರ ದೊಡ್ಡ ಮರವು ಮುಖ್ಯವಾಗಿ ಕಾಡುಗಳಲ್ಲಿ ಕಾಣಬಹುದು. ಕೆಲವು ವೇಳೆ ಕಾಡಂಚುಗಳಲ್ಲಿ ಈ ಮರ ಪೊದೆಗಳಂತೆ ಬೆಳೆದಿರುವುದನ್ನು ಕಾಣಬಹುದು.

ಇದರ ಬೀಜಗಳನ್ನು ಸುಮಾರು 12 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ಮಣ್ಣಿನ ಪ್ರತಿ ಕುಂಡಕ್ಕೆ ನಾಲ್ಕು ಬೀಜಗಳನ್ನು ಬಿತ್ತನೆ ಮಾಡಿ, ಕಾಲಕಾಲಕ್ಕೆ ನೀರು ಕೊಟ್ಟರೆ 10 ರಿಂದ 14 ದಿನಗಳಲ್ಲಿ ಮೊಳಕೆ ಒಡೆಯುತ್ತವೆ (ಅಂಕುರಣ ಪ್ರಮಾಣ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ).

ಇದರ ಕೊಂಬೆಗಳು ಮತ್ತು ಮರದ ಭಾಗಗಳು ಬಲಿಷ್ಠವಾಗಿರುವುದರಿಂದ ರೈತರು ತಮ್ಮ ಸಣ್ಣಪುಟ್ಟ ಉಪಕರಣಗಳಾದ ಕೈಗುದ್ದಲಿ ಮತ್ತು ಇತರೆ ರೈತಾಪಿ ಉಪಕರಣಗಳನ್ನು ತಯಾರಿಸಲು ಬಳಸುತ್ತಾರೆ.

ಈ ಮರದ ಎಲೆ ಮತ್ತು ಬೇರುಗಳಲ್ಲಿ ಹಲವು ಔಷಧೀಯ ಗುಣಗಳು ಇರುವುದಾಗಿ ಪಾರಂಪರಿಕ ವೈದ್ಯಕೀಯದಲ್ಲಿ ಉಲ್ಲೇಖಗಳಿವೆ. ರೋಗ ನಿರೋಧಕವಾಗಿ ಬಳಸುತ್ತಾರೆ ಎಂದು ನಂಬಿಕೆ ಇದೆ. ರಕ್ತನಾಳ ಕಾಯಿಲೆಗಳು, ಮುಟ್ಟಿನ ಸಮಸ್ಯೆ, ಮಧುಮೇಹ ನಿಯಂತ್ರಣಕ್ಕೆ ಇದರ ಎಲೆಗಳನ್ನು ಬಳಸುತ್ತಾರೆ ಎಂಬುದು ಪರಂಪರೆ. ಎಲೆಗಳಲ್ಲಿ ಉರಿ ನಿವಾರಕ ಮತ್ತು ಶಿಲೀಂಧ್ರ ನಾಶಕ ಗುಣಗಳಿರುವುದಾಗಿ ಕೆಲವು ಅಧ್ಯಯನಗಳು ಸೂಚಿಸುತ್ತವೆ; ಆದ್ದರಿಂದ ಕೆಮ್ಮು ಮತ್ತು ಅತಿಸಾರಕ್ಕೆ ಜನಪದ ವೈದ್ಯಕೀಯದಲ್ಲಿ ಬಳಸುತ್ತಾರೆ.





**ಲೇಖನ: ಕೆ. ಪಿ. ಶಂಕರಪ್ಪ**

**ಶಾಂತಮ್ಮ ಎಸ್.**

ಬೆಂಗಳೂರು ಜಿಲ್ಲೆ

# ವನಬಂಧ 11




**ಎಡದಿಂದ ಬಲಕ್ಕೆ**

1. ಶಿಖರವೇರಿದರೂ ಸಹ ಬೇಟೆಯಾಡುವುದೇ ಪರಮಗುರಿ (3)
2. ಜೇನುಗಳ ಒಡತಿ ಇಲ್ಲಿ ಬೆನ್ನು ತೋರಿ ಕುಳಿತಿದ್ದಾಳೆ (4)
3. ಕಾಡಿನ ಅತೀ ನಿರ್ದಯಿ ಬೇಟೆಗಾರ ಪ್ರಾಣಿ ಆದರೆ ಕೆಂಪಗಿಲ್ಲ (3)
4. ಈ ಹಂಸ ಬಹುಶಃ ರಾಜರ ವಂಶಕ್ಕೆ ಸೇರಿದ್ದಾಗಿರಬಹುದೇ? (4)
5. ಸುಡು ಬಿಸಿಲು ಅಥವಾ ಬೆಂಕಿಯ ಸನಿಹದಲ್ಲಿ ಅನುಭವಕ್ಕೆ ಬರುವ ಬಿಸಿ (2)
6. ಕೊಕ್ಕಿನಿಂದ ಬೇಟೆಯಾಡುವ ಈ ಪಕ್ಷಿಜಾತಿ, ದಾರಿಯಲ್ಲಿ ಸಿಕ್ಕರೆ? (3)
7. ಪಾರಿವಾಳದ ಜಾತಕ, ಹೂವಿನಲ್ಲಿ ಅಡಗಿದೆಯೇ? (4)
8. ಗೆದ್ದು ಬರಲು ಅರಿಯದ ಈ ಜೀವಿ ಮಣ್ಣಿನಲ್ಲಿ ಗೂಡುಕಟ್ಟುತ್ತದೆ (3)
9. ಗಿಡಮರಗಳಲ್ಲಿ ಹೆಚ್ಚಿನ ಪಾಲು ಈ ಹಸಿರು ಹೊದಿಕೆಗಳಿಂದ ತುಂಬಿರುತ್ತದೆ (2)

**ಮೇಲಿನಿಂದ ಕೆಳಕ್ಕೆ**

1. ಶಿಕಾರಿಗೆ ಹೊರಟಿದೆ ಈ ಚಂದದ ಬೇಟೆಗಾರ ಪಕ್ಷಿ (3)
3. ಗರಿಗರಿಯಾಗಿರದಿದ್ದರೂ ಈ ಹುಲ್ಲು ಮಾತ್ರ ಗಣಪನಿಗೆ ಬಲು ಪ್ರೀತಿ (3)

4. ಹಾರದೊಂದಿಗೆ ಬರುವ ಇನ್ನೊಂದು ವಸ್ತು ನವಿಲಿನ ತಲೆಯಲ್ಲಿ ಕಂಡು ಬರುತ್ತದೆ (3)
5. ವಸುಂಧರೆಯೂ ಹೌದು ಆದರೆ ಎರಡು ಅಕ್ಷರಗಳು ಅಷ್ಟೇ (2)
6. ತೆಂಗಿನಕಾಯಿ ಒಣಗಿಸಿಡಿ ಎಂದರೆ ಕೊಬ್ಬು ಎನ್ನುತ್ತಿದ್ದಾರೆ (3)
7. ಕಾಡಿನ ನೆಲದಲ್ಲಿ ಉದುರುವ ಈ ಒಣಗಿದ ಎಲೆಗಳು ಬೇಟೆಗಾರರ ಬಗ್ಗೆಯೂ ಎಚ್ಚರಿಸುತ್ತವೆ (4)
8. ಕಮ್ಮಾರ ಏನನ್ನೋ ಮೆಲುಕು ಹಾಕುತ್ತಾ ಇಲ್ಲಿ ಕಬ್ಬಿಣ ಕಾಯಿಸುತ್ತಾನೆ (3)

**ಕಾನನ ವನಬಂಧ - 10 (ಮಾರ್ಚ್ - 2026) ಉತ್ತರಗಳು:**

**ಎಡದಿಂದ ಬಲಕ್ಕೆ**

1. ಹೆಬ್ಬಾವು 2. ಚಿಲಿಪಿಲಿ 3. ತರಕಾರಿ 4. ಪಾರಿವಾಳ 5. ದ್ವಿದಳ 6. ಗೊರವಂಕ 7. ಮಕರಂದ 8. ನರಭಕ್ಷಕ

**ಮೇಲಿನಿಂದ ಕೆಳಕ್ಕೆ**

1. ಹೆಬ್ಬುಲಿ 2. ಮಾವುತ 3. ಗರಿ 4. ಪಾರದರ್ಶಕ 5. ಪರಿಮಳ 6. ಗೊಬ್ಬರ 7. ಕದನ 8. ಕಪ್ಪೆ

**ವನಬಂಧ: ಸುಬ್ಬು ಬಾದಲ್**
**ಬೆಂಗಳೂರು ಜಿಲ್ಲೆ**







ವಿವಿ ಅಂಕಣ

# ನಿನ್ನ ಕೆಂಪು – ನನ್ನ ಕೆಂಪೇ?

"ಅಬ್ಬಾ... ಹೋಲಿಸಿ ವರ್ಣಿಸಲಿಕ್ಕೆ ಉದಾಹರಣೆಯೇ ತಕ್ಷಣ ಸಿಗದು." ಎಷ್ಟು ಚಂದ ನೋಡೋಕೆ. ಪ್ರತೀ ಬಾರಿ ಪಕ್ಷಿ ವೀಕ್ಷಣೆಗೆ ಹೋದಾಗ, 'ಸ್ಮಾಲ್ ಮಿನಿವೆಟ್' ಎಂಬ ಸಣ್ಣ ಪಕ್ಷಿ ಕಂಡಾಗ ಆಗುವ ಅನುಭವವದು. ಬೆಳಗಿನ ಎಳೆ ಸೂರ್ಯನ ಕಿರಣಗಳು ಅವುಗಳ ಮೈಮೇಲೆ ಬಿದ್ದರಂತೂ ಹೇಳಲು ಕಷ್ಟ, ಅನುಭವಿಸಬೇಕು ಆ ನೋಟವನ್ನ. ಸಾಮಾನ್ಯವಾಗಿ ಗುಂಪಿನಲ್ಲಿ ಇರುವ ಇವುಗಳು, ಸಣ್ಣ ಮೆಲುದನಿಯ ಶಬ್ದವನ್ನು ಮಾಡುತ್ತಾ ಒಂದು ಜಾಗದಲ್ಲಿ ಕೂರದೆ, ಮರವೆಲ್ಲಾ ಓಡಾಡುತ್ತಿರುತ್ತವೆ. ಹಾಗೆ ಹಾರುವಾಗ ಕಾಣುವ ಅವುಗಳ ಕತ್ತಿನಿಂದ ಎದೆ ಭಾಗದ ತುಂಬಿರುವ ಆ ಕೆಂಪು ಬಣ್ಣದ ಅಂದ, ನೋಡಲು ಬರೀ ಆನಂದ. ಆದರೆ, ನಾನು ನೋಡುತ್ತಿರುವ ಆ ಕೆಂಪು ಬಣ್ಣ, ನಿಮಗೂ ಹಾಗೇ ಕಾಣುತ್ತಿದೆಯೇ? ಇಲ್ಲವಾದರೆ ನಮಗೆ ಹೇಗೆ ತಿಳಿಯುತ್ತದೆ? ಇದು ಚಿಕ್ಕ ವಯಸ್ಸಿನಿಂದ ನನಗೂ ಇದ್ದ ಪ್ರಶ್ನೆ. ಕೊನೆಗೂ ಇದಕ್ಕೆ ಉತ್ತರ ಸಿಕ್ಕಂತಾಗಿದೆ. ಹೊಸ ಸಂಶೋಧನೆ ಅದನ್ನೇ ಹೇಳಲೆಂದು ಬಂದಿದೆ.

ಪ್ರತಿಯೊಬ್ಬ ಮನುಷ್ಯ ಬಣ್ಣಗಳನ್ನು ನೋಡಿದಾಗ ಅವನ ಕಣ್ಣಿನಿಂದ ಮೆದುಳು ಸೇರುವ ಸಂದೇಶಗಳು, ಅಲ್ಲಿ ಒಂದು ಬಗೆಯ ನರ-ವಿನ್ಯಾಸವನ್ನು (ನ್ಯೂರಾನ್ ಪ್ಯಾಟರ್ನ್) ಮಾಡುತ್ತವೆ. ಅದರ ಸಹಾಯದಿಂದ ಮೆದುಳು, ಆತ ಯಾವ ಬಣ್ಣ ನೋಡುತ್ತಿದ್ದಾನೆಂದು ಗ್ರಹಿಸುತ್ತದೆ. ಹಾಗೆಯೇ ಪ್ರತೀ ಬಣ್ಣಕ್ಕೂ ಈ ಪ್ಯಾಟರ್ನ್ ಬೇರೆ ಇರುತ್ತದೆ. ಆದ್ದರಿಂದ ಕೆಂಪು ಬಣ್ಣ ನೋಡಿದಾಗಲೂ ಒಂದು ವಿಭಿನ್ನ ಪ್ಯಾಟರ್ನ್ ಮೆದುಳಿನಲ್ಲಿ ಆಗುತ್ತದೆ. ಇದು ಪ್ರತೀ ವ್ಯಕ್ತಿಗೆ ಹೆಚ್ಚಾಗಿ ಬದಲಾಗುವುದಿಲ್ಲ ಎನ್ನುವುದನ್ನೇ ವಿಜ್ಞಾನಿ ಆಂಡ್ರಿಯಾಸ್ ಹೇಳುತ್ತಿರುವುದು.






ಈ ಸಂಶೋಧನೆಗಾಗಿ, ಆಂಡ್ರಿಯಾಸ್ ಮತ್ತು ಅವರ ಇನ್ನೊಬ್ಬ ಸಹೋದ್ಯೋಗಿ ವಿಜ್ಞಾನಿ ಬ್ಯಾನ್ನರ್ಟ್ ಅವರು 15 ವ್ಯಕ್ತಿಗಳನ್ನು ಆರಿಸಿಕೊಂಡರು. ಎಲ್ಲರಿಗೂ ಕೆಂಪು, ಹಸಿರು ಮತ್ತು ಹಳದಿ ಬಣ್ಣದ ವಿವಿಧ ಛಾಯೆಗಳನ್ನು (shades of colors) ಅನ್ನು ತೋರಿಸಲಾಯಿತು. ಅದರ ಅನುಸಾರವಾಗಿ ಆದ ಮೆದುಳಿನ ಪ್ರತಿಕ್ರಿಯೆಯನ್ನು ಸಂಗ್ರಹಿಸಲಾಯಿತು. ತದನಂತರ ಆ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿಕೊಂಡು ಅವರು ನೋಡಿದ ಬಣ್ಣ ಯಾವುದು ಇರಬಹುದೆಂದು ಗುರುತಿಸಲಾಯಿತು. ಅದರ ಪ್ರಕಾರವಾಗಿ ಹೇಳುವುದಾದರೆ, ಪ್ರತೀ ವ್ಯಕ್ತಿಯ ಬಣ್ಣಗಳ ಗ್ರಹಿಕೆಯಲ್ಲಿ ಅಷ್ಟೇನು ವ್ಯತ್ಯಾಸವಿರಲಿಲ್ಲ. ಅಂದರೆ ಸರಿ ಸುಮಾರಾಗಿ ಎಲ್ಲರೂ ನೋಡುವ ಬಣ್ಣಗಳ ಗ್ರಹಿಕೆ ಒಂದೇ ಆಗಿದೆ ಎಂದು ಈ ಸಂಶೋಧನೆಯ ಮೂಲಕ ತಿಳಿಯುತ್ತದೆ.

ಆದರೆ, ಈ ಸಂಶೋಧನೆಯು ಎಲ್ಲರ ಬಣ್ಣಗಳ ಗ್ರಹಿಕೆ ಒಂದೇ ಆಗಿರುತ್ತದೆ ಎಂದು ಹೇಳುತ್ತದಾದರೂ, ಬಣ್ಣಗಳನ್ನು ನೋಡಿದಾಗ ಅಥವಾ ಗ್ರಹಿಸುವಾಗ ಆಗುವ 'ಅನುಭವ' ಹೇಗಿರುತ್ತದೆ ಎಂದು ತಿಳಿಯಲಾಗುವುದಿಲ್ಲ. ಈ ಅನುಭವವು ಪ್ರತಿಯೊಬ್ಬರಿಗೂ ವಿಭಿನ್ನವಾಗೇ ಇರುತ್ತದೆ. ಇದು ಪ್ರತೀ ವ್ಯಕ್ತಿಯ ಭಾವ ಹಾಗೂ ಜಾಗೃತಿಗೆ (consciousness) ಅನುಗುಣವಾಗಿರುತ್ತದೆ ಎನ್ನುತ್ತಾರೆ ಅದೇ ವಿಜ್ಞಾನಿಗಳು; ಹಾಗೂ, ಈ ವಿಷಯ ಸದಾ ಚರ್ಚಿಸಬಹುದಾದ ವಿಚಾರವಾಗಿ ಉಳಿಯುತ್ತದೆ.

ನೋಡಿದಿರಾ! ನಿನ್ನ ಕೆಂಪು, ನನ್ನ ಕೆಂಪೇ? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿತಾದರೂ, ನಾನು ಅದೇ ಕೆಂಪನ್ನು ಗ್ರಹಿಸುವಾಗ ಆಗುವ ಅನುಭವ, ನಿನ್ನ ಅನುಭವದ ಹಾಗೆಯೇ ಇದೆಯೇ? ಎಂಬ ಪ್ರಶ್ನೆಗೆ ಉತ್ತರ ಇನ್ನೂ ವಿಜ್ಞಾನದ ಬಳಿ ಇಲ್ಲ. ಉತ್ತರವಿಲ್ಲ ಎಂದ ಮಾತ್ರಕ್ಕೆ ಆ ಪ್ರಶ್ನೆ ನಿಲ್ಲುವುದಿಲ್ಲ. ಉತ್ತರವಿಲ್ಲದ ಪ್ರಶ್ನೆಗಳಿಗೆ ಉತ್ತರ ಹುಡುಕುವುದೇ ವಿಜ್ಞಾನದ ಚಾಳಿ. ಪ್ರಶ್ನೆಗಳೇ ಅದಕ್ಕೆ ಸ್ಫೂರ್ತಿ. ಅಲ್ಲವೇ? ಹಾಗಾದರೆ, ಉತ್ತರ ಸಿಗದ ಪ್ರಶ್ನೆಗಳು ಬೇಸರಗಳಾಗಬೇಕಿಲ್ಲ, ಬದಲಿಗೆ ಉತ್ತರ ಹುಡುಕುವ ಭರದಲ್ಲಿ ನಡೆಯಬೇಕಾದ ಸುಂದರ ಅನುಭವಗಳಿಗೆ ನಾಂದಿಯಾಗಿರಬಹುದಲ್ಲಾ?!

ನಿಮ್ಮ ಉತ್ತರ ಸಿಗದ ಪ್ರಶ್ನೆಗಳ, ಅದರಿಂದಾದ ಅನುಭವಗಳ ಬಗ್ಗೆ ನಮಗೂ ಬರೆದು ತಿಳಿಸಿ.

**Source:** [www.snexplores.org](http://www.snexplores.org)

**ಲೇಖನ: ಜೈಕುಮಾರ್ ಆರ್.**
**ಬೆಂಗಳೂರು ನಗರ ಜಿಲ್ಲೆ**


© ಅನುಪಮ ಹೆಚ್. ಎಂ.

# ಬಾ ಚೈತ್ರ

ಫಾಲ್ಗುಣವ ಬದಿಸರಿಸಿ ಬಾ ಚೈತ್ರ ನಲಿನಲಿದು
ನಿನ್ನ ಕಾಲ್ಗುಣದಿಂದ ಹಸಿರು ಚೆಲ್ಲಿ
ಮಾಮರದಿ ಕೋಗಿಲೆಯು ಗಿಳಿಗುಬ್ಬಿ ಗೊರವಂಕ
ಬಲುಮೋಹಗೊಂಡಿಹವು ನೆಲ್ಮೆಯಲ್ಲಿ

ಕಪ್ಪು ಮೋಡಗಳನ್ನು ನೀ ಹೊತ್ತು ತಂದಿರಲು
ಮೊದಲ ಹನಿ ಧರೆಗಿಳಿಯೆ ಕಂಪು ಕಂಪು
ಶಿಶಿರ ಋತುವಿನ ಧೂಳು ಎಲ್ಲೆಡೆಯು ಮುತ್ತಿರಲು
ನೀ ಮಳೆಯ ಸುರಿಸಿರಲು ತಂಪು ತಂಪು


ಮಾಗಿದೆಲೆಗಳು ಉದುರಿ ಬೋಳು ಮರಗಳ ಸಾಲು
ಎಲ್ಲಿ ನೋಡಲಲ್ಲಿ ಚಿಗುರು ಹರಿಸು
ಕೆರೆಕಟ್ಟೆ ಒಣಗುತಲಿ ಬಿರುಕು ಮೂಡಿಹುದಲ್ಲಿ
ಸುರಿಸು ಬಿರುಮಳೆಯನ್ನು ಸೊಬಗು ತರಿಸು

ಚೈತ್ರ ರಾಜನೆ ನಿನ್ನ ಆಧರಿಸಿ ಕರೆದಿಹನು
ಕವಿತನ್ನ ಹೃದಯದೊಳು ಪದಗೀಚುತ
ಬಾ ಚೈತ್ರ ಧರೆಯೆಡೆಗೆ ಬಂದು ಹಸಿರನ್ನುಣಿಸು
ಕಾದಿಹೆವು ಸ್ವಾಗತಕೆ ಅನುರಣಿಸುತ.

ಚನ್ನಕೇಶವ ಜಿ. ಲಾಳನಕಟ್ಟೆ
ತುಮಕೂರು ಜಿಲ್ಲೆ

© ಅರವಿಂದ ರಂಗನಾಥ್

# ಪ್ರಕೃತಿ ಬಿಂಬ




**ಸ್ವರ್ಣೆ** **© ಅರವಿಂದ ಕೂಡ್ಲ**

ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳ ವಿವಿಧ ಪ್ರದೇಶಗಳ ಕುರುಚಲು ಕಾಡುಗಳು, ಎಲೆ ಉದುರುವ ಮತ್ತು ನಿತ್ಯಹರಿದ್ವರ್ಣ ಕಾಡುಗಳಲ್ಲಿ ಕಂಡುಬರುವ ಸ್ವರ್ಣೆ ಚಿಟ್ಟೆಯು ಪ್ಯಾಪಿಲಿಯೊನಿಡೆ (Papilionidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಟ್ರಾಯ್ಡ್ಸ್ ಮಿನೋಸ್ (*Troides minos*) ಎಂದು ಕರೆಯಲಾಗುತ್ತದೆ. ಮೇಲಿನ ರೆಕ್ಕೆಗಳು ಕಪ್ಪಾಗಿದ್ದು, ಪೇಲವ ಬಿಳಿಯ ರೇಖೆಗಳನ್ನು ಹೊಂದಿರುತ್ತವೆ. ಕೆಳಗಿನ ರೆಕ್ಕೆಗಳ ಮೇಲೆ ಹಳದಿ ಮಿಶ್ರಿತ ಚಿನ್ನದ ಬಣ್ಣವಿರುತ್ತದೆ. ಭಾರತದ ಅತ್ಯಂತ ದೊಡ್ಡ ಚಿಟ್ಟೆಯಾಗಿದ್ದು, ಬಹಳ ಎತ್ತರದಲ್ಲಿ ನಿಧಾನಗತಿಯಲ್ಲಿ ಹಾರಾಡುತ್ತದೆ. ಕರ್ನಾಟಕದ ರಾಜ್ಯ ಚಿಟ್ಟೆಯೂ ಆಗಿದೆ. ಆತಿಥೇಯ ಸಸ್ಯಗಳಿಂದ ದೇಹದೊಳಗೆ ಶೇಖರಿಸಿರುವ ವಿಷವನ್ನು ತನ್ನ ಪ್ರಕಾಶಮಾನವಾದ ರೆಕ್ಕೆಗಳಿಂದ ತೋರ್ಪಡಿಸಿ ಪರಭಕ್ಷಕಗಳು ತಮ್ಮನ್ನು ತಿನ್ನಲಾಗದಂತೆ ಎಚ್ಚರಿಕೆ ನೀಡುತ್ತವೆ. ಅರಿಸ್ಟೋಲೋಕಿಯೇಸಿ (Arstolochiaceae) ಕುಟುಂಬಕ್ಕೆ ಸೇರಿದ ಚಕ್ರನಿಕೆ, ಈಶ್ವರ ಬಳ್ಳಿ ಮುಂತಾದ ಗಿಡಗಳು ಇವುಗಳ ಅತಿಥೇಯ ಸಸ್ಯಗಳಾಗಿವೆ.




**ಅಶೋಕ** © ಅರವಿಂದ ಕೂಡ್ಲ

ನೇಪಾಳ, ಭಾರತ ಮತ್ತು ಶ್ರೀಲಂಕಾದ ಸಮತಟ್ಟು ಪ್ರದೇಶ, ಎಲೆ ಉದುರುವ ಕಾಡು, ಕುರುಚಲು ಕಾಡು, ಮತ್ತು ನಿತ್ಯ ಹರಿದ್ವರ್ಣ ಕಾಡುಗಳಿಗೆ ಸ್ಥಳೀಯವಾಗಿರುವ ಅಶೋಕ ಚಿಟ್ಟೆಯು ಪ್ಯಾಪಿಲಿಯೊನಿಡೆ (Papilionidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಗ್ರಾಫಿಯಂ ಅಗಮೆಮ್ನಾನ್ (*Graphium agamemnon*) ಎಂದು ಕರೆಯಲಾಗುತ್ತದೆ. ಮೇಲಿನ ಮತ್ತು ಕೆಳಗಿನ ರೆಕ್ಕೆಗಳ ಬಣ್ಣ ಕಪ್ಪಾಗಿದ್ದು, ರೆಕ್ಕೆಗಳ ಮೇಲೆ ಉದ್ದವಾದ ನಾಲ್ಕು ಸಾಲು ಹಸಿರು ಮಚ್ಚೆಗಳಿರುತ್ತವೆ ಹಾಗೂ ಕೆಳಗಿನ ರೆಕ್ಕೆಗಳಲ್ಲಿ ಬಾಲವಿರುತ್ತದೆ. ಅತ್ಯಂತ ವೇಗವಾಗಿ ಹಾರಾಡುತ್ತಿರುತ್ತವೆ ಮತ್ತು ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಾಂಶವನ್ನು ಹೀರಿಕೊಳ್ಳುತ್ತವೆ. ಕಂಬದ ಮರ (False Ashoka) ಇದರ ಅತಿಥೇಯ ಸಸ್ಯವಾಗಿದೆ.



**ಕಾಡು ಕಪ್ಪು ಚುಕ್ಕೆ** © ಅರವಿಂದ ಕೂಡ್ಲ

ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾದಲ್ಲಿ ಕಂಡುಬರುವ ಕಾಡು ಕಪ್ಪು ಚುಕ್ಕೆ ಚಿಟ್ಟೆಯು ಲೆಪಿಡೊಪ್ಟೆರಾ (Lepidoptera) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಕ್ಯಾಲೆಟಾ ಡೆಸಿಡಿಯಾ (*Caleta decidia*) ಎಂದು ಕರೆಯಲಾಗುತ್ತದೆ. ಇದರ ಮೇಲ್ಭಾಗವು ಗಾಢ ಕಂದು ಬಣ್ಣದಲ್ಲಿರುತ್ತದೆ. ಹಿಂಭಾಗದ ರೆಕ್ಕೆಯ ಮೇಲೆ ಅಗಲವಾದ ಬಿಳಿ ಅಡ್ಡ ಪಟ್ಟಿಯನ್ನು ಹೊಂದಿದ್ದು, ಬುಡದಲ್ಲಿ ಗಾಢ ಕಂದು ಬಣ್ಣದವಿರುತ್ತದೆ. ಈ ಪಟ್ಟಿಯು ಮುಂಭಾಗದ ರೆಕ್ಕೆಯ ಅರ್ಧದಷ್ಟು ಮುಂದುವರಿದು, ಕೊಕ್ಕೆಯಂತಹ ಗುರುತನ್ನು ರೂಪಿಸುತ್ತದೆ. ಕೆಳಭಾಗವು ಬಿಳಿಯಾಗಿದ್ದು, ದೊಡ್ಡ ಕಪ್ಪು ತೇಪೆಗಳನ್ನು ಹೊಂದಿರುತ್ತದೆ. ಗಂಡು ಚಿಟ್ಟೆಗಳು ಕಾಡಿನ ಹಾದಿಗಳಲ್ಲಿ ಮಣ್ಣು ಹೀರುತ್ತಾ ಓಡಾಡುತ್ತಿರುವುದು ಕಂಡುಬರುತ್ತದೆ. ರಾಮ್ನೇಸಿ (Rhamnaceae) ಕುಟುಂಬದ ಕೊಟ್ಟೆ ಹಣ್ಣಿನ ಮರ (*Zizipus rugosa*) ಇದರ ಅತಿಥೇಯ ಸಸ್ಯವಾಗಿದೆ.




**ತ್ರಿವರ್ಣೆ** © ಅರವಿಂದ ಕೂಡ್ಲ

ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ತೇವಾಂಶವಿರುವ ನಿತ್ಯ ಹರಿದ್ವರ್ಣ ಕಾಡುಗಳು, ಎಲೆ ಉದುರುವ ಕಾಡುಗಳಲ್ಲಿ ಕಂಡುಬರುವ ಕಮಾಂಡರ್ ಚಿಟ್ಟೆಯು ನಿಂಫಾಲಿಡೇ (Nymphalidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಮಾಡುಜಾ ಪ್ರೊಕ್ರಿಸ್ (*Moduza procris*) ಎಂದು ಕರೆಯಲಾಗುತ್ತದೆ. ಮೇಲಿನ ರೆಕ್ಕೆಗಳು ಕಂದು ಮಿಶ್ರಿತ ಕೆಂಪು ಬಣ್ಣವಿದ್ದು, ಮಧ್ಯಭಾಗದಲ್ಲಿ ದೊಡ್ಡದಾದ ಬಿಳಿ ಚುಕ್ಕೆಗಳ ಪಟ್ಟಿಯನ್ನು ಹೊಂದಿದೆ. ಹಾರಾಡುವಾಗ ಈ ಪಟ್ಟಿಯು ಎರಡು ರೆಕ್ಕೆಗಳ ಮೇಲೆ V ಆಕಾರದಲ್ಲಿ ಕಾಣುತ್ತದೆ. ರೆಕ್ಕೆಗಳ ಹಿಂಭಾಗವು ಮಂದವಾದ ಕೆಂಪು, ಕಂದು ಬಣ್ಣದಲ್ಲಿದ್ದು, ಬಿಳಿ ಬೂದು ಬಣ್ಣವನ್ನು ಕೆಳಭಾಗದಲ್ಲಿ ಹೊಂದಿರುತ್ತದೆ. ವೇಗದ ಹಾರಾಟಗಾರ, ಕುಳಿತಾಗ ರೆಕ್ಕೆಯನ್ನು ಹಿಂದೆ ಮುಂದೆ ಆಡಿಸುತ್ತದೆ ಹಾಗೂ ತೇವಾಂಶವಿರುವ ಮಣ್ಣಿನ ಮೇಲೆ ಕುಳಿತು ಖನಿಜಾಂಶವನ್ನು ಹೀರಿಕೊಳ್ಳುತ್ತದೆ. ಕ್ಯಾಪರೇಸೀ (Capparaceae) ಕುಟುಂಬದ ಮರಗಾಡೆ ಗಿಡ, ರೋಸೇಸಿ (Rosaceae) ಕುಟುಂಬದ ಬಾದಾಮಿ ಮರ, ರುಬಿಯೇಸಿ (Rubiaceae) ಕುಟುಂಬದ ನೀರು ಕದಂಬ, ಕದಂಬ, ಬೆಳ್ಳೋತಿ ಮರ ಇತ್ಯಾದಿ ಇವುಗಳ ಅತಿಥೇಯ ಸಸ್ಯಗಳಾಗಿವೆ.

**ಚಿತ್ರ: ಅರವಿಂದ ಕೂಡ್ಲ**
**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಜೀವವೈವಿಧ್ಯತೆಯ ಆಗರವಾದ ನಮ್ಮ ಪ್ರಕೃತಿಯು ಒಂದು ವಿಸ್ಮಯವೇ ಸರಿ. ಈ ಅಗಣಿತ ಜೀವಜಂತುಗಳಲ್ಲಿ ಲೆಕ್ಕಕ್ಕೆ ಸಿಗುವಂತಹವು ಒಂದಷ್ಟಾದರೆ, ಲೆಕ್ಕದ ಪರಿಧಿಗೂ ಬಾರದವು ಎಷ್ಟೋ ಎಂಬುದು ಆಶ್ಚರ್ಯಕಾರಿಯಾಗಿದೆ. ವೈವಿಧ್ಯಮಯವಾದ ಮರ-ಗಿಡಗಳು, ಪ್ರಾಣಿಗಳು, ಚಿಲಿಪಿಲಿ ಗುಟ್ಟುವ ಹಕ್ಕಿಗಳು ಹಾಗೂ ಕ್ರಿಮಿಕೀಟಗಳು ಪರಸ್ಪರ ಸಂಬಂಧವನ್ನು ಹೊಂದಿದ್ದು, ಪರಸ್ಪರ ಅವಲಂಬಿಯಾಗಿ ನಿಸರ್ಗದಲ್ಲಿ ಸಮತೋಲನವನ್ನು ಕಾಯ್ದುಕೊಳ್ಳುವಲ್ಲಿ ಮಹತ್ತರ ಪಾತ್ರವಹಿಸುತ್ತವೆ.

ಅದಕ್ಕಾಗಿ ಈ ಜೀವವೈವಿಧ್ಯವನ್ನು ಕಾಪಾಡಿ, ಉಳಿಸಿ, ಬೆಳೆಸುವ ಸಂಕಲ್ಪದೊಂದಿಗೆ ಪ್ರತಿ ವರ್ಷ **ಮೇ 22** ರಂದು **ಅಂತರಾಷ್ಟ್ರೀಯ ಜೀವವೈವಿಧ್ಯ** ದಿನವನ್ನು ಆಚರಿಸಲಾಗುತ್ತದೆ. 2000ನೇ ಇಸವಿಯಿಂದ ಈ ದಿನವನ್ನು ಜಾಗತಿಕವಾಗಿ ಆಚರಿಸಲಾಗುತ್ತಿದ್ದು, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಜೀವವೈವಿಧ್ಯದ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಅಭಿವೃದ್ದಿಯ ಹೆಸರಿನಲ್ಲಿ ಅರಣ್ಯ ನಾಶ, ರಸ್ತೆ ಮತ್ತು ಕಾರ್ಖಾನೆಗಳ ನಿರ್ಮಾಣವು ಜೀವವೈವಿಧ್ಯತೆಯ ಮಾರಣಹೋಮಕ್ಕೆ ನಾಂದಿಯಾಗುತ್ತಿವೆ. ಇದರ ಪರಿಣಾಮವಾಗಿ ಇಂದು ಅನೇಕ ಪ್ರಾಣಿಗಳು ಅಳಿವಿನಂಚಿಗೆ ತಲುಪಿವೆ. ಆದ್ದರಿಂದ ನಾವೆಲ್ಲರೂ ಈ ಅಮೂಲ್ಯ ಜೀವಸಂಕುಲವನ್ನು ರಕ್ಷಿಸುವ ಸಲುವಾಗಿ ಟೊಂಕ ಕಟ್ಟಿ ನಿಲ್ಲಬೇಕಾಗಿದೆ.ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



## ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಚಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.

**With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.**

**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**

**SCAN TO PAY**

**WITH ANY BHIM UPI APP**

Merchant Name : WILDLIFE CONSERVATION GROUP



***- Donations are exempted from Income Tax under section 80 G (IT act 1961)**